ಇ)

ವರ್ಷ	ಕಾಮಗಾರಿಗಳ ವಿವರ		
	ಪೂರ್ಣ	ಅಪೂರ್ಣ	ಒಟ್ಟು
2008–09	1	29	30
2009–10	543	2048	2591
2010–11	1369	1137	2506
ಒಟ್ಟು	**1913**	**3214**	**5127**

ಸದರಿ ಕಾಮಗಾರಿಗಳ ವಿವರಗಳನ್ನು ಪ್ರಶ್ನೆಯ "ಅ"ನಲ್ಲಿ ಒದಗಿಸಿರುವ ಅನುಬಂಧದಲ್ಲಿ ಇರುವಂತೆ.

ಈ) ಸದರಿ ಯೋಜನೆಯು ಒಂದು ಬೇಡಿಕೆಯ ಆಧಾರಿತ ಕಾರ್ಯಕ್ರಮವಾಗಿರುವುದರಿಂದ, ಕೆಲಸದ ಬೇಡಿಕೆಯನ್ನು ಆಧರಿಸಿ ಅನುದಾನವನ್ನು ಬಳಸಿಕೊಂಡು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಉ) ಸದರಿ ಯೋಜನೆಯು ಒಂದು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿರುವುದರಿಂದ ಜನರ ಬೇಡಿಕೆಯನ್ನು ಆಧರಿಸಿ ಅನುದಾನವನ್ನು ಬಳಸಲಾಗುತ್ತಿದೆ. ಯಾವುದೇ ಒಂದು ಆರ್ಥಿಕ ವರ್ಷದಲ್ಲಿ ಖರ್ಚಾಗದೇ ಉಳಿದಿರುವ ಹಣವನ್ನು ಮುಂದಿನ ಸಾಲಿಗೆ ಮುಂದುವರೆಸಿ ಬಳಸಲಾಗುವುದು.

ಬಂಟ್ವಾಳ ತಾಲ್ಲೂಕಿಗೆ ಪದವಿಪೂರ್ವ ಶಾಲೆ

93 (392) ಶ್ರೀ ಖಾದರ್ ಯು.ಟಿ. (ಮಂಗಳೂರು):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 2010–11 ನೇ ಸಾಲಿಗೆ ಮತ್ತು 2011–12ನೇ ಸಾಲಿಗೆ ಸರ್ಕಾರಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜು ಹೊಸದಾಗಿ ಪ್ರಾರಂಭಿಸಲು ಅನುಮತಿ ಕೋರಿ ಬಂದಿರುವ ಪ್ರಸ್ತಾವನೆಗಳು ಎಷ್ಟು; (ವಿವರ ಒದಗಿಸುವುದು)

ಆ) ಈ ಪ್ರಸ್ತಾವನೆಗಳಲ್ಲಿ ಎಷ್ಟು ಹೊಸ ಕಾಲೇಜು ಸ್ಥಾಪನೆಗೆ ಅನುಮತಿ ನೀಡಲಾಗಿದೆ. ಉಳಿಕೆ ಇರುವ ಪ್ರಸ್ತಾವನೆಗಳು ಯಾವುವು;

ಇ) ಬಂಟ್ವಾಳ ತಾಲ್ಲೂಕು ಕಲ್ಲಡ್ಕ ಅನುಗ್ರಹ ಮಹಿಳಾ ಕಾಲೇಜಿನ ಪ್ರಸ್ತಾವನೆ ಯಾವ ಹಂತದಲ್ಲಿದೆ; ವಿಳಂಬಕ್ಕೆ ಕಾರಣಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) 1. ಖಾಸಗಿ ಪದವಿ ಪೂರ್ವ ಕಾಲೇಜು ಮಂಜೂರಾತಿ ಕೋರಿ, ರಾಜ್ಯಾದ್ಯಂತ, 2010-11ನೇ ಸಾಲಿನಲ್ಲಿ 314 ಮತ್ತು 2011-12ನೇ ಸಾಲಿನಲ್ಲಿ ಒಟ್ಟು 256 ಅರ್ಜಿಗಳು ಬಂದಿರುತ್ತವೆ. ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

2. 2010-11 ಮತ್ತು 2011-12ನೇ ಸಾಲುಗಳಲ್ಲಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಕೋರಿ ರಾಜ್ಯಾದ್ಯಂತ ಸಾಕಷ್ಟು ಮನವಿಗಳು ಬಂದಿರುತ್ತವೆ. ಆದರೆ, ಹಾಲಿ ಪ್ರಾರಂಭಿಸಿರುವ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಯಾವುದೇ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಬಾರದೆಂದು ಸರ್ಕಾರವು ನಿರ್ದೇಶನ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಗಳು ಬಂದಿರುವುದಿಲ್ಲ. ಆದಾಗ್ಯೂ, ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದ ಮೇರೆಗೆ ಎರಡು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಆ) 1. 2010-11ನೇ ಸಾಲಿನಲ್ಲಿ 156 ಮತ್ತು 2011-12ನೇ ಸಾಲಿನಲ್ಲಿ 112 ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಉಳಿಕೆ ಪ್ರಸ್ತಾವನೆಗಳನ್ನು ಸದರಿ ವರ್ಷಗಳಲ್ಲಿ ಸರ್ಕಾರವು ಪರಿಗಣಿಸಿರುವುದಿಲ್ಲ. ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.

2. 2011-12ನೇ ಸಾಲಿನಲ್ಲಿ ಎರಡು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ಇ) ಅನುಗ್ರಹ ಎಜುಕೇಶನಲ್ ಟ್ರಸ್ಟ್, ಕಲ್ಲಡ್ಕ, ಗೋಲ್ತಮಜಲು ಗ್ರಾಮ, ಬಂಟ್ವಾಳ ತಾಲ್ಲೂಕು ಈ ಸಂಸ್ಥೆಗೆ 2011-12ನೇ ಸಾಲಿನಲ್ಲಿ ಖಾಸಗಿ ಮಹಿಳಾ ಪದವಿ ಪೂರ್ವ ಕಾಲೇಜು ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು, ಸರ್ಕಾರದ ಪತ್ರ ಸಂ.ಇಡಿ 190 ಎಸ್‌ಹೆಚ್‌ಹೆಚ್ 2011 ದಿನಾಂಕ 08-11-2011ರಲ್ಲಿ, ಈ ಪ್ರಸ್ತಾವನೆಯನ್ನು 2012-13ನೇ ಸಾಲಿಗೆ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ತಿಳಿಸಲಾಗಿದೆ.